**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .**

SC. No.77-2023

ದೋ.ಸಾ. 6

ಫ್ರಾ.ಸಾ. 3

ಪ್ರ.ವ.ಬೊ.ದಿನಾಂಕ. 13-01-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಪ್ರಭು |
| ತಂದೆ / ಗಂಡನ ಹೆಸರು | - | ಬಸಪ್ಪ |
| ವಯಸ್ಸು | - | 25 |
| ಉದ್ಯೋಗ | - | ಗಾರೆಕೆಲಸ |
| ವಾಸ ಸ್ಥಳ | - | ಗಿಡ್ಡನಕಟ್ಟೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನನಗೆ ಫ್ರಾ.ಸಾ.1, 2 ಹಾಗೂ ಚಾ.ಸಾ.5, 7 ಮತ್ತು 8 ರವರ ಪರಿಚಯ ಇರುತ್ತದೆ. ನಾನು ಗಾರೆಕೆಲಸ ಮಾಡಿಕೊಂಡು ಗಿಡ್ಡನಕಟ್ಟೆ ಗ್ರಾಮದಲ್ಲಿಯೇ ವಾಸ ಮಾಡಿಕೊಂಡಿರುತ್ತೇನೆ. ನನಗೆ ಈ ಪ್ರಕರಣದಲ್ಲಿ ಮೃತಪಟ್ಟ ಬಸವರಾಜನ ಪರಿಚಯ ಇರುತ್ತದೆ. ಫ್ರಾ.ಸಾ.1 ರವರು ಅವರ ಊರು ಆದ ಕೆಬ್ಬೇನಹಳ್ಳಿಯಲ್ಲಿ ಹೊಸದಾಗಿ ಒಂದು ಮನೆಯನ್ನು ಕಟ್ಟಿಸುತ್ತಿದ್ದರು. ನನಗೆ ಮೃತ ಬಸವರಾಜ ಗೆಳೆಯನಾಗಬೇಕು. ಸದರಿ ಮನೆಯನ್ನು ಕಟ್ಟಿಸುತ್ತಿರುವಾಗ ನಾನು ಅಲ್ಲಿಯೇ ಬಸವರಾಜನ ಜೊತೆ ವಾಸ ಮಾಡುತ್ತಿದ್ದೆ. ಆ ಸಮಯದಲ್ಲಿ ಮೃತನು ವಿದ್ಯಾಭ್ಯಾಸ ಕಲಿಯುತ್ತಿದ್ದ.

ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಮುಖ ಪರಿಚಯ ಇರುತ್ತದೆ. ಮೃತನು ವಿದ್ಯಾಭ್ಯಾಸ ಮಾಡುತ್ತಿರುವಾಗ 2 ನೇ ಆರೋಪಿಯ ಮಗಳಾದ ವಿನೋದಳನ್ನು ಪ್ರೀತಿಸುತ್ತಿದ್ದು, ಅವರಿಬ್ಬರು ಒಬ್ಬರಿಗೊಬ್ಬರು ಪ್ರೀತಿಸುತ್ತಿದ್ದರು. ಆ ರೀತಿ ಮೃತನು ಸದರಿ ವಿನೋದಳೊಂದಿಗೆ ಪ್ರೀತಿಸುವಾಗ ಆರೋಪಿತರು ಆತ ಕಾಲೇಜಿಗೆ ಹೋಗುವಾಗ ಆತನಿಗೆ ಕಿರುಕುಳ ನೀಡುತ್ತಿದ್ದರು. ಅಲ್ಲದೇ ಆರೋಪಿತರು ಫ್ರಾ.ಸಾ.1 ರವರ ಮನೆಗೂ ಬಂದು ಸದರಿ ಪ್ರೀತಿಯ ವಿಚಾರಕ್ಕೆ ಜಗಳವಾಡಿರುತ್ತಾರೆ.

ಮೃತನು ಮೃತಪಟ್ಟ ದಿನ ನಾನು ಕೆಲಸಕ್ಕೆ ಹೋಗಿ ಸಂಜೆ ಬಂದು ಮಲಗಿದ್ದು, ಆ ದಿನ ಮೃತನು ತುಂಬಾ ಬೇಸರದಿಂದ ಇದ್ದು, ಆರೋಪಿತರು ಆತನ ಮನೆಗೆ ಬಂದು ಜಗಳವಾಡಿದ ಕುರಿತಾಗಿ, ಅಲ್ಲದೇ ಆ ದಿನ ಮಧ್ಯಾಹ್ನ ಸಾರ್ವಜನಿಕ ಆಸ್ಪತ್ರೆಯ ಬಳಿ ಆರೋಪಿತರು ಆತನಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದ ಕಾರಣ ಮತ್ತು ಆರೋಪಿತರು ವಿನೋದಳ ಸುದ್ದಿಗೆ ಬರಬೇಡ ಎಲ್ಲಿಯಾದರೂ ಹೋಗಿ ಸಾಯಿ, ಇಲ್ಲವಾದರೆ ನಾವೇ ಸಾಯಿಸುತ್ತೇವೆ ಎಂದು ತನಗೆ ಬೈದಿದ್ದಾರೆ ಎಂದು ಬೇಸರದಿಂದ ಇದ್ದು, ಆಗ ನಾನು ಆತನನ್ನು ಸಮಾದಾನ ಪಡಿಸಿದ್ದು, ಊಟಕ್ಕೆ ಕರೆದಿದ್ದು, ಆದರೆ ಆತ ಬಾರದೇ ಇರುವ ಕಾರಣ ನಾನು ನನ್ನ ಆಂಟಿಯ ಮನೆಗೆ ಊಟಕ್ಕೆ ಹೋಗಿದ್ದು, ಊಟ ಮುಗಿಸಿ ರಾತ್ರಿ 9-30 ಗಂಟೆಗೆ ಬಂದಾಗ ಸದರಿ ಹೊಸದಾಗಿ ಕಟ್ಟಿಸುತ್ತಿರುವ ಮನೆಯ ಬಾಗಿಲು ಹಾಕಿಕೊಂಡು ಮನೆಯ ಒಳಗಡೆ ನಾವು ಮಲಗುತ್ತಿದ್ದ ಟಿವಿ ಇದ್ದ ಕೋಣೆಯಲ್ಲಿಯೇ ನೇಣು ಹಾಕಿಕೊಂಡಿದ್ದ. ನಂತರ ನಾನು ಕೂಡಲೇ

ಫ್ರಾ.ಸಾ.1 ರವರ ಮನೆಗೆ ಹೋಗಿ ವಿಚಾರ ತಿಳಿಸಿದ್ದು, ಅವರೆಲ್ಲರೂ ಬಂದು ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಆತ ಮೃತಪಟ್ಟಿರುತ್ತಾನೆ ಎಂದು ತಿಳಿಸಿರುತ್ತಾರೆ.

ತದನಂತರ ಫ್ರಾ.ಸಾ.1 ರವರು ಈ ಕುರಿತು ದೂರನ್ನು ಸಲ್ಲಿಸಿದ್ದು, ನಂತರ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನಿ.ಪಿ.2 ರಿಂದ 4 ರಲ್ಲಿ ಮೃತನ ಶರೀರವನ್ನು ಹಾಗೂ ನಿ.ಪಿ.8 ರಿಂದ 11 ರಲ್ಲಿ ಮೃತ ನೇಣು ಬಿಗಿದುಕೊಂಡ ಸ್ಥಳವನ್ನು ನೋಡಿ ಗುರುತಿಸಿರುತ್ತಾರೆ.

( ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ದಿಃ 03-11-2022 ರಂದು ಮದ್ಯಾಹ್ನ 2-30 ಗಂಟೆ ಸಮಯದಲ್ಲಿ ನಾನು ಮೃತನೊಂದಿಗೆ ಜಗಳೂರು ಪಟ್ಟಣಕ್ಕೆ ಹೋಗಿದ್ದು, ಸಾರ್ವಜನಿಕ ಆಸ್ಪತ್ರೆಯ ರಸ್ತೆಯಲ್ಲಿ ಹೋಗುವಾಗ ಆರೋಪಿತರು ಮೃತನನ್ನು ತಡೆದು, ಆತನಿಗೆ ಅವಾಚ್ಯ ಶಬ್ದಗಳಿಂದ ಬೈದು, ವಿನೋದಳ ಸಹವಾಸಕ್ಕೆ ಹೋಗಬೇಡ ಎಂದು ಹೇಳಿ, ಜೀವಸಹಿತ ಬಿಡುವುದಿಲ್ಲ, ಇಲ್ಲ ಎಂದರೆ ನೀನೇ ನೇಣು ಹಾಕಿಕೊಂಡು ಸಾಯಿ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೇ, ಅಲ್ಲದೇ 2 ನೇ ಆರೋಪಿತಳು ಆತನಿಗೆ ಅವಾಚ್ಯ ಶಬ್ದಗಳಿಂದ ಬೈದು, ಏನು ಮಾಡಬೇಕು ಎಂದು ಗೊತ್ತಿದೆ ಎಂದು ಧಮಕಿ ಹಾಕಿದ್ದು, ಆಗ ಮೃತನು ಬೇಸರಮಾಡಿಕೊಂಡಿದ್ದು, ಆಗ ಆತನನ್ನು ಸಮಾದಾನ ಪಡಿಸಿ ಗ್ರಾಮಕ್ಕೆ ಕರೆದುಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. ಅಲ್ಲದೇ ಆ ಸಮಯದಲ್ಲಿ ಮೃತನು ನನ್ನ ಬಳಿ ಈ ವಿಚಾರವನ್ನು ಯಾರಿಗೂ ಹೇಳಬೇಡ ಎಂದು ಹೇಳಿಕೊಂಡಿದ್ದನು ಎಂದರೆ ಸರಿಯಲ್ಲ. ಈ ರೀತಿಯಾಗಿ ನಾನು ಪೋಲೀಸರಿಗೆ ಹೇಳಿಕೆ ನೀಡುವಾಗ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಪಿ.12 ಎಂದು ಗುರುತಿಸಲಾಯಿತು. ಸದರಿ ದಿನ ನಾನು ಮೃತನೊಂದಿಗೆ ಇದ್ದರೂ ಕೂಡ ಈಗ ಅಲ್ಲಿ ಆತನ ಜೊತೆ ಇರಲಿಲ್ಲ ಎಂದು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ನಾನು ಗಿಡ್ಡನಕಟ್ಟೆಯ ಖಾಯಂ ನಿವಾಸಿ ಎಂದರೆ ಸರಿ. ನನಗೆ 15 ವರ್ಷಗಳಿಂದ ಮೃತನ ಪರಿಚಯ ಇರುತ್ತದೆ. ಆತ ಪರಿಚಯ ಇದ್ದ ಕಾರಣ ನಾನು ಆತನ ಮನೆಗೆ ಹೋಗಿ ಬಂದು ಮಾಡುತ್ತಿದ್ದು, ಆ ದಿನದಿಂದ ಫ್ರಾ.ಸಾ.1 ಮತ್ತು ಇತರರು ನನಗೆ ಪರಿಚಯವಾಗಿರುತ್ತಾರೆ ಎಂದರೆ ಸರಿ. ಸದರಿ ಫ್ರಾ.ಸಾ.1 ರವರು ಕಟ್ಟಿಸುತ್ತಿದ್ದ ಹೊಸ ಮನೆಯ ಕೆಲಸವನ್ನು ನಾನು ಮಾಡಿದ್ದು ಇರುವುದಿಲ್ಲ. ನಾನು ಫ್ರಾ.ಸಾ.1 ರವರ ಊರಿನಲ್ಲಿ ನನ್ನ ಸಂಬಂಧಿಕರು ಇದ್ದ ಕಾರಣ ಹೋಗಿ ಬಂದು ಮಾಡುತ್ತಿದ್ದೆ.

ಮೃತನು ಮೃತಪಟ್ಟ ದಿನ ಸಂಜೆ 6-00 ಗಂಟೆಗೆ ನನ್ನನ್ನು ಭೇಟಿಯಾಗಿರುತ್ತಾನೆ. ಆರೋಪಿತರು ಕಾಲೇಜಿನ ಬಳಿ ಬಂದು ತನಗೆ ಕಿರುಕುಳ ನೀಡುತ್ತಿದ್ದಾರೆ ಎಂದು ಮೃತನು ನನ್ನ ಬಳಿ ಹೇಳಿಕೊಂಡಾಗ ಆತನನ್ನು ಕರೆದುಕೊಂಡು ಠಾಣೆಗೆ ಹೋಗಿ ದೂರನ್ನು ದಾಖಲಿಸುವ ಕುರಿತು ಯಾವುದೇ ಪ್ರಕ್ರಿಯೇ ನಾನು ಮಾಡಿರುವುದಿಲ್ಲ, ಯಾಕೆಂದರೆ ಮೃತನು ನನ್ನ ಬಳಿ ಯಾರ ಬಳಿಯೂ ಹೇಳಬೇಡ ಎಂದು ಹೇಳಿಕೊಂಡಿದ್ದ.

ನಾನು ಈ ವಿಚಾರವನ್ನು ಫ್ರಾ.ಸಾ.1 ರವರು ದೂರು ಸಲ್ಲಿಸಿ ಬಂದ ಬಳಿಕ ಅವರ ಬಳಿ ಹೇಳಿರುತ್ತೇನೆ. ಮೃತನು ಮೃತಪಟ್ಟ ಮರುದಿನವೇ ಫ್ರಾ.ಸಾ.1 ರವರು ದೂರು ದಾಖಲಿಸಿರುತ್ತಾರೆ. ಫ್ರಾ.ಸಾ.1 ರವರು ದೂರು ದಾಖಲಿಸುವ ಸಮಯದಲ್ಲಿ ನಾನು ಅವರ ಜೊತೆ ಠಾಣೆಗೆ ಬಂದಿದ್ದೆ. ಆ ಸಮಯದಲ್ಲಿ ನಾನು ಠಾಣೆಯ ಒಳಗಡೆ ಹೋಗದೇ ಇರುವ ಕಾರಣ ದೂರನ್ನು ಯಾರು ಬರೆದಿದ್ದಾರೆ ಎಂದು ನನಗೆ ತಿಳಿದಿರುವುದಿಲ್ಲ. ನನಗೆ ದೂರಿನಲ್ಲಿ ಬರೆದಿರುವ ವಿಚಾರ ತಿಳಿಯದೇ ಇದ್ದರೂ ಕೂಡ ಫ್ರಾ.ಸಾ.1 ರವರು ಈಗ ಹೇಳಿಕೊಟ್ಟ ರೀತಿಯಲ್ಲಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ಮೃತನು ಕಾಲೇಜಿಗೆ ಹೋಗುವಾಗ ಕಿರುಕುಳ ನೀಡುತ್ತಿದ್ದರು ಎಂದು ನಾನು ಆತನ ಸ್ನೇಹಿತನಾದ ಕಾರಣ ಈಗ ಸೃಷ್ಟಿಸಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿತಳ ಗಂಡ ಫ್ರಾ.ಸಾ.1 ಮತ್ತು ಇತರರ ವಿರುದ್ಧ ಕ್ರೈ ನಂ.257/2022 ರಂತೆ ಆಕೆಯ ಮಗಳಿಗೆ ತೊಂದರೆ ನೀಡುತ್ತಿದ್ದಾರೆ ಎಂದು ದೂರು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನಾವು ದೂರು ಸಲ್ಲಿಸಿದ ಬಳಿಕ ದೂರು ಸಲ್ಲಸಿದ್ದಾರೆ ಎಂದು ನುಡಿದಿರುತ್ತಾರೆ.

2 ನೇ ಆರೋಪಿತಳ ಮಗಳು ಹಾಗೂ ಮೃತ ಒಬ್ಬರಿಗೊಬ್ಬರು ಪ್ರೀತಿಸುತ್ತಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಕೆ ಮೃತನನ್ನು ಪ್ರೀತಿಸದೇ ಇದ್ದರೂ ಕೂಡ ಮೃತನೇ ಆಕೆಗೆ ಪ್ರೀತಿಸು ಎಂದು ಹಿಂಬಾಲಿಸಿ ಕಿರುಕುಳ ನೀಡುತ್ತಿದ್ದ ಎಂದರೆ ಸರಿಯಲ್ಲ. ಈ ಕಾರಣದಿಂದ 2 ನೇ ಆರೋಪಿ ಮತ್ತು ಆಕೆಯ ಗಂಡ ಫ್ರಾ.ಸಾ.1 ರವರ ಬಳಿ ಬಂದು ಮೃತನಿಗೆ ಬುದ್ದಿವಾದ ಹೇಳು ಎಂದು ಹೇಳಿರುವ ವಿಚಾರ ನನಗೆ ತಿಳಿದಿರುತ್ತದೆ. 2 ನೇ ಆರೋಪಿ ಮತ್ತು ಆಕೆಯ ಗಂಡ ಮೃತನು ಅವರ ಮಗಳಿಗೆ ತೊಂದರೆ ನೀಡುತ್ತಿರುವ ವಿಚಾರದ ಕುರಿತು ದೂರು ದಾಖಲಿಸುತ್ತಾರೆ ಎಂದು ತಿಳಿದು ಮೃತನು ತೀರಿಕೊಂಡಿರುವುದನ್ನು ಉಪಯೋಗಿಸಿಕೊಂಡು ಆರೋಪಿತರ ವಿರುದ್ಧ ಸುಳ್ಳು ಸಂಗತಿಗಳ ದೂರನ್ನು ಸಲ್ಲಿಸಿದ್ದು, ಅದಕ್ಕೆ ನಾನು ಫ್ರಾ.ಸಾ.1 ರವರಿಗೆ ಸಹಕರಿಸಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತನಿಗೆ ಮದುವೆಯಾಗದೇ ಇರುವ ಸಹೋದರಿ ಇದ್ದಾಳೆ ಎಂದರೆ ಸರಿ. ಆಕೆಯ ಮದುವೆಯಾದ ಬಳಿಕ ನಿನ್ನ ಮದುವೆಯ ಕುರಿತು ಮಾತನಾಡೋಣ ಎಂದು ಮೃತನ ತಂದೆ ತಾಯಿ ಆತನಿಗೆ ಹೇಳುತ್ತಿದ್ದರು ಎಂದರೆ ಸರಿ. ಮೃತನು ಆತನ ಪಾಲಕರು ಆತ ಪ್ರೀತಿಸುತ್ತಿದ್ದ ಹುಡುಗಿಯ ಜೊತೆ ಮದುವೆ ಮಾಡುತ್ತಿಲ್ಲ, ಮುಂದಕ್ಕೆ ಹಾಕುತ್ತಿದ್ದಾರೆ ಎಂದು ಬೇಸರದಿಂದ ಇದ್ದ ಎಂದರೆ ಸರಿಯಲ್ಲ. ಆತ ಈ ರೀತಿಯಾಗಿ ಬೇಸರದಿಂದ ಇದ್ದರೂ ಕೂಡ ನಾನು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ತನಗೆ ತೊಂದರೆ ನೀಡುತ್ತಿದ್ದಾರೆ ಎಂದು ಮೃತನು ನನ್ನ ಬಳಿ ಹೇಳಿಕೊಂಡಿದ್ದು ಇರುವುದಿಲ್ಲ, ನಾನು ಆತನ ಸ್ನೇಹಿತನಾದ ಕಾರಣ ಈಗ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಮೃತನಿಗೆ ಹೋಗಿ ಸಾಯಿ ಎಂದು ಪ್ರಚೋದನೆ ನೀಡಿರುತ್ತಾರೆ ಎಂದು ನಾನು ಈ ಪ್ರಕರಣಕ್ಕಾಗಿ ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತನ ಸಾವಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನನಗೆ ಆರೋಪಿತರ ಮುಖ ಪರಿಚಯ ಇದೆ ಎಂದು ಹೇಳಿದ್ದು, ಅವರನ್ನು ನಾನು ಕೆಚ್ಚೇನಹಳ್ಳಿಯಲ್ಲಿ ನೋಡಿ ಪರಿಚಯ ಇರುತ್ತದೆ. ಆರೋಪಿತರಲ್ಲಿ 1 ನೇ ಆರೋಪಿಯು ಕೆಚ್ಚೇನಹಳ್ಳಿಯವನು ಅಲ್ಲ ಎಂದರೆ ಸರಿ. 2 ನೇ ಆರೋಪಿಯನ್ನು ನಾನು ನನ್ನ ಆಂಟಿಯ ಮನೆಯ ಬಳಿ ಬಹಳ ವರ್ಷಗಳಿಂದ ನೋಡುತ್ತಿದ್ದೇನೆ. ಈಗ 2 ನೇ ಆರೋಪಿತಳು ಜಗಳೂರಿನಲ್ಲಿಯೇ ವಾಸವಾಗಿರುತ್ತಾಳೆ ಎಂದರೆ ಸರಿ. ಮೃತನು ತೀರಿಕೊಳ್ಳುವ ಎರಡು ವರ್ಷಗಳ ಮೊದಲೇ 2 ನೇ ಆರೋಪಿತಳು ತನ್ನ ಸಂಸಾರದೊಂದಿಗೆ ಜಗಳೂರಿನಲ್ಲಿ ಮನೆಯನ್ನು ಲೀಸಿಗೆ ಪಡೆದು ವಾಸವಾಗಿರುತ್ತಾಳೆ ಎಂದರೆ ನನಗೆ ತಿಳಿದಿರುವುದಿಲ್ಲ. ಮೃತನ ಕಾಟ ತಡೆಯಲಾರದೇ 2 ನೇ ಆರೋಪಿತಳು ಸಂಸಾರದೊಂದಿಗೆ ಜಗಳೂರಿಗೆ ಹೋಗಿ ವಾಸವಾಗಿರುವ ವಿಚಾರ ನನಗೆ ತಿಳಿದಿದ್ದರೂ ಕೂಡ ಈಗ ತಿಳಿದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವ ವಿಚಾರ ತಿಳಿಯದೇ ಇದ್ದರೂ ಕೂಡ ಮೃತನು ಸ್ನೇಹಿತನಾದ ಕಾರಣ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2026.01.19 11:20:41 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.